ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಶ್ರೀ ಜಿ. ರಾಮಂದಾಸ್ ಅವರ ಬೆಸರಿನ ಮುಂದೆ ಇರುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

"ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಮಯದಲ್ಲಿ ೫ ವರ್ಷ ಸೇವೆಯನ್ನಾಗಿರುವ ಟಿ. ಸಿ. ಪೆಚ್. ಶಿಕ್ಷಣ ಪಡೆದಿರುವಂತಹವರಿಗೆ ಆದ್ಯತೆ ಕೊಡುವ ಬಗ್ಗೆ"

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

೩. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿ.

ಶ್ರೀ ಚಂದ್ರಶೇಖರರೆಡ್ಡಿ ದೇಶಮುಖ್ ಮದನ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ (೨೭೦) (ಅ) ನಿಯಮದ ಅಡಿಯಲ್ಲಿ ಬರುವ ೩ನೇ ಅನುಸೂಚಿಗೆ ತಿದ್ದುಪಡಿಗಳನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಇದರ ಉದ್ದೇಶ ಏನೆಂಬುದು ನಮಗೆ ಗೊತ್ತಾಗಬೇಕು. ಇದರ ಉದ್ದೇಶವನ್ನು ಮಾನ್ಯ ಸದಸ್ಯರು ಹೇಳಬೇಕು. ಏಕೆಂದರೆ ಡಿಲೀಟ್ ಮಾಡತಕ್ಕದ್ದು ಸುಮಾರು ೧-೨-೩-೪-೫-೬-೭-೮ ಇಂಡಸ್ಟ್ರೀಸ್ ಇದೆ. ಮತ್ತು ಸೇರಿಸತಕ್ಕಂಥಾದ್ದೂ ಇದೆ. ಲಾಸ್ ಆಗಿದೆ ಎಂದು ಏನೂ ಇದರಲ್ಲಿ ಇಲ್ಲ. ಆದ್ದರಿಂದ ಯಾವ ಆಧಾರದ ಮೇಲೆ ಇವನ್ನು ಡಿಲೀಟ್ ಮಾಡುತ್ತಾ ಇದ್ದೀರಿ. ಇದಕ್ಕೆ ಕಾರಣ ಏನು ಮತ್ತು ಹೊಸದಾಗಿ ಏನು ಸೇರಿಸುತ್ತಾ ಇದ್ದೀರಿ. ಅದಕ್ಕೆ ಕಾರಣ ಏನು ಎನ್ನತಕ್ಕಂಥಾದ್ದನ್ನು ಹೇಳಿದರೆ ನಮಗೆ ಸ್ವಲ್ಪ ಗೊತ್ತಾಗುತ್ತದೆ.

ಅಧ್ಯಕ್ಷರು.—೫ ನಿಮಿಷದಲ್ಲಿ ಹೇಳಿ.

ಶ್ರೀ ಚಂದ್ರಶೇಖರರೆಡ್ಡಿ ದೇಶಮುಖ್ ಮದನ.—ಮಾನ್ಯ ಅಧ್ಯಕ್ಷರೆ, ಇಲ್ಲಿ ಕೆಲವೊಂದು ಇಂಡಸ್ಟ್ರೀಸ್‌ನ್ನು ತೆಗೆದು ಹಾಕಿದ್ದೇವೆ. ಅವು ಯಾವುವೆಂದರೆ,

1) The Karnataka Dairy Development Corporation Limited, Bangalore,
2) The Karnataka Milk Products Limited, Bangalore;
3) The Karnataka Shoping Corporation Limited;
4) The Karnataka Copper Consortim Limited, Bangalore;
5) The Canara Chemicals & Fertilizers Limited, Bangalore Chitradurga Copper Company, Limited, Bangalore.
6) Vignan Industries Limited, Tarikere.
7) Karnataka Rose wood Products Limited, Mangalore
8) Mysore Tobacco Company Limited.
9) Karnataka Backward Classes and Miniorities Development Corporation Limited, Bangalore.

ಇವನ್ನೆಲ್ಲಾ ತೆಗೆದುಹಾಕಿದೆ. ಸೇರಿಸಿದ್ದು ಯಾವುವೆಂದರೆ,—

1) Karnataka Telelom Limited,
2) Karnataka Inland Fisheries Development Company Ltd.,
3) Karnataka State Coir Development Company Limited,

4) The Karnataka State Small Industries Marketing Corporation Ltd..
5) The Karnataka State Textile Corporation.
6) The Karnataka State Police Housing Corporation Limited,
7) The Karnataka Backward Classes Development Corporation Ltd.
8) The Karnataka Minorities Development Corporation. Limited.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಇದನ್ನು ನೋಡಿ, ನನಗೆ ಏನು ಆಶ್ಚರ್ಯ ಆಗಿಸುತ್ತದೆ ಅಂದರೆ, ಈಗ ಕರ್ನಾಟಕ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್, ಬೆಂಗಳೂರು ಎನಿದೆ ಇದು ಬಿಗ್ ಕಾರ್ಪೊರೇಷನ್. ಇದಕ್ಕೆ ಕೋಟ್ಯಾಂತರ ರೂಪಾಯಿ ಹಣವನ್ನು ಕೊಡಲಾಗಿದೆ. ಒಂದು ಕಡೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನ್ನು ತೆಗೆಯುತ್ತೀರಿ, ಇನ್ನೊಂದು ಕಡೆ ಸೇರಿಸುತ್ತೀರಿ. ಇದಕ್ಕೆ ಕಾರಣವೇನು ?

ಅಧ್ಯಕ್ಷರು.—ಇದನ್ನು ಮುಂದಕ್ಕೆ ಹಾಕೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಒಂದು ಕಡೆ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನ್ನು ತೆಗೆಯುತ್ತೀರಿ. ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸಸ್ ಅಂಡ್ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಅನ್ನು ತೆಗೆದುಹಾಕಿ. ಇನ್ನೊಂದು ಕಡೆ ಕರ್ನಾಟಕ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ ಅನ್ನು ಸೇರಿಸುತ್ತೀರಿ. ಏನಿದು ? ಸಿಮಿಲರ್ ಇರತಕ್ಕದ್ದನ್ನು, ಫೈನಾಷಿಯಲ್ ಇನ್‌ವಾಲ್ವ್‌ಮೆಂಟ್ ಇರತಕ್ಕದ್ದನ್ನು ಒಂದು ಕಡೆ ಸೇರಿಸುತ್ತೀರಿ, ಇನ್ನೊಂದು ಕಡೆ ತೆಗೆಯುತ್ತೀರಿ ಇದರ ಉದ್ದೇಶ ಏನು. ನಮಗೆ ಇದರ ಉದ್ದೇಶ ಗೊತ್ತಾಗದೇ ಹೋದರೆ ಇದನ್ನು ಒಪ್ಪಿಕೊಳ್ಳುವುದು ಕಷ್ಟ.

ಅಧ್ಯಕ್ಷರು.—ಇದನ್ನು ಮುಂದಕ್ಕೆ ಹಾಕೋಣ: ಖಾರ್ಗೆಯವರೆ, ಇದು ನನಗೂ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಸ್ವಲ್ಪ ಇದರ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು.—ಆಮೇಲೆ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಏನು ಮಾಡಬೇಕು ಎಂದು ಹೇಳುತ್ತೀರಿ.

ಅಧ್ಯಕ್ಷರು.—ಇದನ್ನು ಮುಂದಕ್ಕೆ ಹಾಕೋಣ. ನನಗೂ ಇದರ ವಿಚಾರ ಗೊತ್ತಿಲ್ಲ. ಎಲ್ಲಾ ದುಡ್ಡು ಹೊಳುಮಾಡಿ ದಿವಾಳಿ ಮಾಡಿದ್ದನ್ನು ಡಿಲೀಟ್ ಮಾಡಿಬಿಟ್ಟರೆ.....

ಶ್ರೀ ಎ. ಲಕ್ಷ್ಮೀಸಾಗರ್.—ಪ್ರಯೋಜನವಾಗುವುದಿಲ್ಲ, ಹೌದು ಸರ್.

ಶ್ರೀ ಎಂ. ಎಸ್. ಕೃಷ್ಣನ್.—ಈರೀತಿ ಚೇಂಜ್ ಮಾಡುವುದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು.—ಇದನ್ನು ಮುಂದಕ್ಕೆ ಹಾಕಿದ್ದೇನೆ. ಈಗ ಬೇಡಿಕೆಗಳ ಮೇಲೆ ಇನ್ನೂ ೭ ಜನ ಮಾತನಾಡುವವರು ಇದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾವು ನಿನ್ನೆ ಒಂದು ನೋಟೀಸ್ ಕೊಟ್ಟಿದ್ದೇವೆ. ಸಹಿ ಮಾಡಿಯೇ ಕೊಟ್ಟಿದ್ದೇವೆ. ನಾನು, ಪುಟ್ಟಪ್ಪತಿ ಮತ್ತು ಶಾಣಪ್ಪನವರು ಸಹಿ ಹಾಕಿದ್ದೇವೆ.

ಅಧ್ಯಕ್ಷರು.—ನೋಟೀಸ್ ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ನೋಟೀಸ್ ಕೊಡಲಾಗಿದೆ. ಮತ್ತೆ ಈ ವಿಚಾರ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಸೇರಿದ್ದು ಎಂದು ತಾವು ಹೇಳಿದರೆ. ನಾವು ಅದಕ್ಕೆ ಪ್ರತಿಭಟನೆ ಮಾಡಬೇಕಾಗುತ್ತೆ,

ಶ್ರೀ ಎಂ. ಎಸ್. ಕೃಷ್ಣನ್.—ಪ್ರತಿ ಸಾರಿಯೂ ವಿಧಾನ ಸಭೆಯಲ್ಲಿ ಈ ವಿಷಯವನ್ನು ಕಡೇ ನಿಮಿಷದಲ್ಲಿ ತಂದು ಪಾಸು ಮಾಡಬೇಕೆಂದು ಹೇಳುತ್ತಾರೆ. ಇವತ್ತು ರಾಜ್ಯದಲ್ಲಿ ಮೂರುವರೆ ಲಕ್ಷ ಜನಗಳಿಗೆ ಅನಾನುಕೂಲವಾಗಿದೆ. ಬಗರ್‌ಹುಕ್ಕುಂದಾರರು ಇದರಿಂದ ತೊಂದರೆಗೆ ಒಳಗಾಗಿದ್ದಾರೆ. ಇದು ಬಡವರ ವಿಷಯ, ಸಾಹುಕಾರರ ವಿಷಯ ಅಲ್ಲ. ಬಹಳ ಜನ ಕೃಷಿ ಕಾರ್ಮಿಕರು ಇದ್ದಾರೆ. ಇಂತಹವರ ವಿಷಯದಲ್ಲಿ ಕಾಳಜಿ ತೋರಿಸದೇ ಹೋದರೆ ಹೇಗೆ ? ತಾವು ಸ್ಪಷ್ಟವಾಗಿ ಭರವಸೆ ಕೊಡದೇ ಹೋದರೆ, ನಿಮ್ಮನ್ನು ಇವತ್ತು ಬಿಡುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—೩ ಲಕ್ಷದ ೬೪ ಸಾವಿರದ ೧೪೫ ಕುಟುಂಬಗಳು ಇವೆ ಎಂದು ಸರ್ಕಾರದವರೇ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಪ್ರತಿದಿವಸ ನೀವು ಗದ್ದಲ ಮಾಡುವುದೇ ಆಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಖರ್ಗೆಯವರು ಈ ಒಂದು ವಿಚಾರದಲ್ಲಿ ಶೇಕಡ ೫೦ರಷ್ಟು ಕೂಡ ಪರಿಶಿಷ್ಟ ಜಾತಿಯವರು ಇರುವುದಿಲ್ಲವೆಂದು ಹೇಳಿದ್ದಾರೆ, ಆದರೆ ೧,೯೮,೦೫೦ ಜನ ಪರಿಶಿಷ್ಟ ಜಾತಿಯವರು ಮತ್ತು ವರ್ಗದವರು ಇದ್ದಾರೆ. ಇದನ್ನು ಪ್ರತಿಯೊಂದು ಅಧಿವೇಶನದಲ್ಲೂ ತರುವುದು ಪುನಃ ಹಾಕುವುದು ನಡೆದಿದೆ. ಇವನ್ನೆಲ್ಲಾ ನಾವು ಪ್ರೊಟೆಸ್ಟ್ ಮಾಡುತ್ತೇವೆ. ಅವರು ಕೊಟ್ಟಿರುವ ಆಶ್ವಾಸನೆಗಳನ್ನು ಉಳಿಸಿಕೊಂಡಿಲ್ಲ. ಈ ವಿಚಾರದಲ್ಲಿ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕೆಂದು ನಿನ್ನೆ ಕೂಡ ಹೇಳಿದ್ದೇನೆ. ರಾಜ್ಯದಲ್ಲಿ ೧೦ ಲಕ್ಷ ಜನರಿಗೆ ತೊಂದರೆಯಾಗಿರುವುದರಿಂದ, ಇದನ್ನು ಪಾಸು ಮಾಡಲೇಬೇಕಿದೆ. ಪರಿಶಿಷ್ಟ ವರ್ಗದವರಿಗೆ ಜಮೀನು ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದ್ದರಿಂದ ೨೧ನೇ ತಾರೀಖಿನ ದಿವಸ ಇದನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಹಾಕಿಕೊಂಡು ಪಾಸು ಮಾಡಲೇಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಕಡಿದಾಳ್ ಮಂಜಪ್ಪನವರ ಕಾಲದಿಂದ ರವಿನೂ ಮುಂತ್ರಿಗಳಾಗಿದ್ದಂತವರೆಲ್ಲಾ ಬಗರ್ ಹುಕುಂ ಜಮೀನನ್ನು ರೆಗ್ಯೂಲರೈಸ್ ಮಾಡಿಕೊಂಡು ಬಂದಿದ್ದಾರೆ. ಆ ಒಂದು ಲೆಕ್ಕದ ಪ್ರಕಾರ ಸುಮಾರು ೮೦-೯೦ ಭಾಗದ ಜನರು ಬೇರೆಯವರು ಇದ್ದಾರೆ. ಎಸ್ಸಿ ಮತ್ತು ಎಸ್ಟಿಯವರಿಗೆ ಜಮೀನು ಸಿಕ್ಕಿಲ್ಲ. ಲ್ಯಾಂಡ್ ಅವೈಲಬಲ್ ಇಟ್ಟು, ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಡಿಸ್ಟ್ರಿಬ್ಯೂಟ್ ಮಾಡಬೇಕೆನ್ನುವಾಗ ಇತ್ತು. ರೆಗ್ಯೂಲರೈಸ್ ಆಗುತ್ತದೆ ಎನ್ನುವ ದೃಷ್ಟಿಯಿಂದ ಅನೇಕ ಜನರು ವಿಲೇಜ್ ಆಕೌಂಟೆಂಟರುಗಳನ್ನು ಹಿಡಿದುಕೊಂಡು ಬಗರ್‌ಹುಕುಂ ಸಾಗುವಳಿ ಮಾಡುತ್ತೇವೆಂದು ಬರೆಸಿಕೊಂಡಿದ್ದಾರೆ. ಹರಿಜನರ ಹೆಸರಿನಲ್ಲಿ ಪಹಣಿ ಕೂಡ ಇರುವುದಿಲ್ಲ. ಶೇಕಡ ೬೦ ರಷ್ಟು ಭೂಮಿಯನ್ನು ಈ ಒಂದು ವರ್ಗದವರಿಗೆ ಇಡಬೇಕಾಗಿತ್ತು. ಆದರೆ. ಈಗಾಗಲೇ ಲಕ್ಷಾಂತರ ಎಕರೆ ಜಮೀನನ್ನು ರೆಗ್ಯೂಲರೈಸ್ ಮಾಡಲಾಗಿದೆ. ಸುಮಾರು ೬ಲಕ್ಷ ಎಕರೆ ಜಮೀನನ್ನು ಈಗ ರೆಗ್ಯೂಲರೈಸ್ ಮಾಡಬೇಕಾಗಿದೆ. ಇದಕ್ಕಿಂತ ಹಿಂದೆ ಬೇರೆಯವರಿಗೆ ಲಕ್ಷಾಂತರ ಎಕರೆ ಜಮೀನು ರೆಗ್ಯೂಲರೈಸ್ ಆಗಿದೆ. ೭೯ರ ಆರ್ಡರ್ ಮಾತ್ರ ಹರಿಜನ ಗಿರಿಜನರಿಗೆ ಸೀಮಿತವಾಗಿದ್ದು, ಸುಮಾರು ಒಂದುಲಕ್ಷ ಅರವತ್ತು ಸಾವಿರ ಎಕರೆ ರೆಗ್ಯೂಲರೈಸ್ ಆಗಿದೆ. ಈ ಒಂದು ಅಂತರವನ್ನು ಸರಿಪಡಿಸುವ ದೃಷ್ಟಿಯಿಂದ ಅನೇಕ ಶಾಸಕರು ಒತ್ತಡ ತಂದಿರಬಹುದು. ಇದು ಪಕ್ಷದಲ್ಲೂ ಇದೆ. ಹೊರಗಡೆಯೂ ಇದೆ. ಲ್ಯಾಂಡನ್ನು ಅವೈಲಬಲ್ ಮಾಡಿಕೊಂಡು ಶೇಕಡ ೬೦ ಭಾಗವನ್ನು ಈ ಒಂದು ವರ್ಗದವರಿಗೆ ಮೀಸಲಿಡಬೇಕು. ಈಗ ಮೂರುವರೆ ಲಕ್ಷ ಎಕರೆ ಭೂಮಿ ಇದ್ದು, ಎನ್‌ಕ್ರೋಚ್‌ಮೆಂಟ್ ಅನ್ನು ರೆಗ್ಯೂಲರೈಸ್ ಮಾಡಿದರೆ, ಒಂದು ಲಕ್ಷ ೫೦ ಸಾವಿರ ಎಕರೆ ಮಾತ್ರ ಬರುತ್ತದೆ. ಆದಕ್ಕೋಸ್ಕರ ಇದನ್ನು ತಾವು ಯಾವರೀತಿ ಸರಿಪಡಿಸುತ್ತೀರಾ ಎನ್ನುವ ಪ್ರಶ್ನೆ ಇದೆ. ಆ ಪ್ರಶ್ನೆಯನ್ನು ನಾವು ನೆನ್ನೆ ಸಹ ಕೇಳಿದ್ದೇವೆ. ಈ ಎಲ್ಲಾ ವಿಚಾರಗಳ ಬಗ್ಗೆ ಯೋಚನೆ ಮಾಡಿ ನಿರ್ಣಯಕ್ಕೆ ಬರಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ದಿವಸ ತಮಗೆ ಬೇಕಾದವರಿಗೆ ಜಮೀನನ್ನು ರೆಗ್ಯೂಲರೈಸ್ ಮಾಡಿಕೊಳ್ಳಿ ಪಾಸೂದೆ ತಂದಿದ್ದಾರೆ ಎಂದು ನಿಮಗೆ ಹೇಳುತ್ತಾರೆ. ಈಗ ೧೨ ಲಕ್ಷ ಕುಟುಂಬಗಳು ಇನ್‌ವಾಲ್ವ್‌ಡ್ ಆಗಿರುವುದರಿಂದ ಈ ಪಾಸೂದೆಯನ್ನು ಪಾಸ್ ಮಾಡಿ ಎಂದು ಇವರು ಹೇಳುತ್ತಿದ್ದಾರೆ. ಆದ್ದರಿಂದ, ತಾವು ಎಸ್. ಸಿ. ಮತ್ತು ಎಸ್. ಟಿ. ಜನರಿಗೆ ಯಾವರೀತಿ ನ್ಯಾಯ ದೊರಕಿಸಿಕೊಡುತ್ತೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಪಂಪಾಪತಿ.—೧೦ಲಕ್ಷದಲ್ಲಿ ಹರಿಜನ ಗಿರಿಜನರು ಇದ್ದಾರೆ. ಅನೇಕ ಕಡೆಗಳಲ್ಲಿ ಬಗರ್ ಹುಕ್ಕುಂ ಸಾಗುವಳಿ ಮಾಡಿದವರನ್ನು ಒಕ್ಕಲೆಬ್ಬಿಸಿ ತೊಂದರೆ ಕೊಡತಕ್ಕ ಕೆಲಸ ಆಗಿದೆ. ಅವರು ಹೀಗೆ ಮುಂದುವರಿಯಬೇಕು ಅಂದರೆ ಹೇಗೆ. ಅವರಿಗೆ ತಾವು ಪಟ್ಟಾ ಕೊಟ್ಟರೆ ಅವರು ಬ್ಯಾಂಕುಗಳ

ಮೂಲಕ ಸಾಲ ತೆಗೆದುಕೊಂಡು ಆ ಜಮೀನನ್ನು ಅಭಿವೃದ್ಧಿಪಡಿಸಲಿಕ್ಕೆ ಸಾಧ್ಯವಾಗುತ್ತದೆ ? ಒಂದು ಎರಡು ಎಕರೆ ಇರತಕ್ಕ ಸಾಮಾನ್ಯ ಜನರಿಗೆ ಸಹಾಯ ಮಾಡದೆ ಹಾಗೆ ತಳ್ಳಿಕೊಂಡು ಬಂದರೆ ಅವರ ಪರಿಸ್ಥಿತಿ ಏನಾಗಬೇಕು ? ಅವರು ಅದನ್ನು ಅಭಿವೃದ್ಧಿಪಡಿಸಲಿಕ್ಕೆ ಆಗುವುದಿಲ್ಲ. ಒಕ್ಕಲೆಬ್ಬಿಸುವ ಕೆಲವು ಹಿತಾಸಕ್ತಿಗಳು ಈಗಾಗಲೇ ಪ್ರಯತ್ನ ಮಾಡುತ್ತಿದ್ದಾರೆ. ಹರಿಜನ ಗಿರಿಜನಗೆ ತಾವು ಎಷ್ಟು ಉಳಿಸಬೇಕೋ ಅಷ್ಟು ಉಳಿಸಿ, ಇನ್ನು ಉಳಿದವರಿಗೆ ಸಂಬಂಧಪಟ್ಟಂತೆ ಬೇರೆ ತೆಗೆದುಕೊಂಡುಬಂದು ಪಾಸ್ ಮಾಡಿ. ಈಗ ಹಾಲಿ ಉಳುಮೆ ಯಾರು ಮಾಡುತ್ತಾ ಇದ್ದಾರೆ, ಅವರ ಹೆಸರಿಗೆ ಪಟ್ಟಾ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಪಾರ್ಲಿಯವರು ಒಂದು ಮಾತು ಹೇಳಿದರು, ಅದು ಸರಿಯಾದ ವಿಚಾರ. ಏನೆಂದರೆ, ಹರಿಜನ ಗಿರಿಜನರಿಗೆ ನ್ಯಾಯ ದೊರಕಿಸಿಕೊಡದೇ ಹೋದರೆ ತಪ್ಪಾಗುತ್ತದೆಂದು ಹೇಳಿದರು. ಇಲ್ಲಿ ಹರಿಜನ ಗಿರಿಜನರಿಗೆ ಕೊಡಕೊಡದು ಎನ್ನುವ ಪ್ರಶ್ನೆ ಬರುವುದಿಲ್ಲ, ಅವರಿಗೆ ಕೊಡಬೇಕಾದ್ದು ಕೊಡಲೇಬೇಕಾಗುತ್ತದೆ. ಸುಮಾರು ಮೂರುವರೆ ಲಕ್ಷ ಜನ ಇದ್ದಾರೆ, ಇಲ್ಲಿ ಒಂದು ಲಕ್ಷ ಎಂದು ಹೇಳಿದ್ದಾರೆ, ಇದನ್ನು ನೋಡಿದರೆ ಅವರು ಸರಿಯಾದ ಆಂಕೆ ಅಂಶ ಹೇಳಿಲ್ಲ. ಇನ್ನೊತ್ತು ಹರಿಜನ ಗಿರಿಜನರಿಗೆ ಜಮೀನು ಕೊಡಬೇಕಾದ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಅವನ್ನು ಅವರು ಸರಿಮಾಡಿ ಕೊಡಲಿ. ಇಲ್ಲದಿದ್ದರೆ ಇದು ಸರಿಯೇ ಆಗುವುದಿಲ್ಲ ಎಂದು ದಿನ ತಳ್ಳಿಕೊಂಡು ಬರುವಂತಾದ್ದೇ ಆಗುತ್ತದೆ. ನನಗೆ ಕಂಡುಬಂದ ಹಾಗೆ ಒನೇ ಸಾರಿ ಇದು ನಡೆಯುತ್ತಿದ. ಅಸೆಂಬ್ಲಿ ಮುಗಿಯುವ ಸಂದರ್ಭದಲ್ಲಿ ಬರುತ್ತದೆ. ಅನಂತರ ಅಸೆಂಬ್ಲಿ ಮುಗಿಯುತ್ತದೆ, ಇದು ಬರುವುದೇ ಇಲ್ಲ, ಇದು ಅನುಮಾನಕ್ಕೆ ಆಸ್ಪದವಾಗಿದೆ. ಆದ್ದರಿಂದ ಇದರ ಬಗ್ಗೆ ತಾವು ಕ್ಷಣ ಕ್ಷಣ ಪೀಡಿಸಿ ಮಾಡಿ, ಇಪ್ಪತ್ತೆರಡನೆ ದಿನಸ ತಾವು ಸರಿಯಾದ ಉತ್ತರವನ್ನು ಕೊಡದೇ ಹೋದರೆ ಸಮಿತಿಗೆ ಸಮಾಧಾನವಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಪಾರ್ಟೆ.—ಎನ್‌ಕ್ರೋಚ್‌ಮೆಂಟ್ ರೆಗ್ಯೂಲರೈಸ್ ಮಾಡಿರತಕ್ಕದ್ದರಲ್ಲಿ ೧೦ ಪರ್‌ಸೆಂಟ್ ಎಸ್. ಸಿ. ಮತ್ತು ಎಸ್. ಟಿ. ಜನರು ಇದ್ದರೂ ನಾನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಬಗರ್ ಹುಕ್ಕುಂ ಸಾಗುವಳಿ ಮಾಡಿದಂಥ ಜನರಿಗೆ ಆ ಜಮೀನನ್ನು ಸಕ್ರಮಗೊಳಿಸುವುದರ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ಈ ಮನೆಯಲ್ಲಿ ಮಂಡಿಸಿದೆ, ಇದನ್ನು ಮಂಡಿಸಿದಂಥ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಪಾಸ್ ಮಾಡೋಣ ಎಂದು ಹೇಳಿದೆ. ಆದರೆ ಎಲ್ಲರ ಅಭಿಪ್ರಾಯದಂತೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕೆಂದು ಪೀರ್ಮಾನ ಆಯಿತು. ಆ ಅಭಿಪ್ರಾಯ ಬಂದಮೇಲೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಯಿತು. ನಮಗೆ ಇದರ ಬಗ್ಗೆ ನಿಮಗಿಂತಲೂ ಹೆಚ್ಚಿನ ಆತುರ ಇದೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಆತುರ ಇಲ್ಲ ಎಂದು ಅಲ್ಲ, ಆದರೆ... .. ..

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಸುಮ್ಮನೆ ರಾಜಕೀಯ ಮಾಡಲಿಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನೀವು ಆ ಮಟ್ಟಕ್ಕೆ ಹೋಗಬೇಡಿ. ಇಲ್ಲಿ ಜನರ ಸಮಸ್ಯೆ ಇದೆ, ನಾವು ಆ ರೀತಿ ವರ್ತನೆ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

೧೮-೩೧ ಪಿ. ಎಂ.

* ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಹೋದ ವರ್ಷವೂ ಕೂಡ ಇದನ್ನು ತೆಗೆದುಕೊಳ್ಳಬೇಕೆಂದು ನಾನು ಇಲ್ಲಿ ಹಠ ಹಿಡಿದೆ. ಮಾನ್ಯ ಖಾರ್ಗೆಯವರ ಜೊತೆ, ಮಾನ್ಯ ವಿರೋಧಪಕ್ಷದ ನಾಯಕರ ಜೊತೆ, ಮಾನ್ಯ ಬಂಗಾರಪ್ಪನವರ ಜೊತೆ ಚರ್ಚೆ ಮಾಡಿ ಈ ಪ್ರಸೂತಿಯನ್ನು ಪಾಸ್ ಮಾಡಲೇಬೇಕೆಂದು ಹೇಳಿದೆ. ಆಗ ಅವರು ಹೇಳಿದರು, ಇದರಲ್ಲಿ ಅನೇಕ ಸಮಸ್ಯೆಗಳಿವೆ, ಸುದೀರ್ಘವಾಗಿ ಚರ್ಚೆಯಾಗಬೇಕು, ಆದ್ದರಿಂದ ಈ ಅಧಿವೇಶನದಲ್ಲಿ ಪಾಸ್ ಮಾಡುವುದಕ್ಕಾಗುವುದಿಲ್ಲ ಮುಂದಕ್ಕೆ ಹಾಕಿ ಎಂದು ಹೇಳಿದರು. I wanted to get it passed. ನಂತರ ನಾನು ಇದನ್ನು ಆರ್ಡಿನೆನ್ಸ್ ಮುಖಾಂತರ ಏನಾದರೂ ಪಾಸ್ ಮಾಡಬಹುದೇ ? ಎಂದು ವಿಚಾರ ಮಾಡಿದೆ. ಇದಕ್ಕಾಗಿ ನಾನು ಕಾನೂನು ಇಲಾಖೆಯವರನ್ನು ಕೇಳಿದಾಗ ಅವರು ಇದು ಈಗಾಗಲೇ ಚಾಯಿಸ್ ಸೆಲೆಕ್ಟ್ ಕಮಿಟಿಯ ಮುಂದೆ ಹೋಗಿದೆ, ಈಗ ಇದಕ್ಕೆ ಆರ್ಡಿನೆನ್ಸ್ ಇಷ್ಟೂ ಮಾಡುವುದು ಸರಿಯಲ್ಲ ಎಂದು ಹೇಳಿದರು. ಇದರಲ್ಲಿ ಎರಡು ವಿಷಯಗಳಿವೆ, ಇದು ನಮ್ಮ ಪಕ್ಷದಲ್ಲೂ ಚರ್ಚೆಯಾಗಬೇಕು, ಅವರ ಪಕ್ಷದಲ್ಲೂ ಚರ್ಚೆಯಾಗಬೇಕು, ಸಾರ್ವಜನಿಕರಲ್ಲೂ ಚರ್ಚೆಯಾಗಬೇಕೆಂದು ಮಾನ್ಯ ಸದಸ್ಯರು ಹೇಳಿದರು ಸ್ವಾಮಿ, ಲ್ಯಾಂಡ್ ಗ್ರ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ೫೦ ಪರ್ಸೆಂಟ್ ಎಸ್.ಸಿ. ಎಸ್.ಟಿ. ಜನರಿಗೆ ಹೋಗಬೇಕು, ಉಳಿದುದನ್ನು ಲ್ಯಾಂಡ್‌ಲೆಸ್ ಲೇಬರರ್‌ಗೆ ಹಂಚಬೇಕು. ಇದನ್ನು ನಾವು ಸಕ್ರಮಗೊಳಿಸುವುದು ಇರತಕ್ಕ ನಿಯಮಕ್ಕೆ ವಿರುದ್ಧವಾಗುತ್ತದೆ. ಎಸ್.ಸಿ. ಎಸ್.ಟಿ.ಗೆ ನಿಯಮದ ಪ್ರಕಾರ ಏನು ದೊರೆಯಬೇಕೋ ಅದು ದೊರೆಯುತ್ತಿಲ್ಲ. ಇದರ ಜೊತೆಗೆ ಒತ್ತಡ ಬೇರೆ ಇದೆ. ದಲಿತರು ಇದ್ದಾರೆ, ಎಸ್.ಸಿ. ಎಸ್.ಟಿ. ಯವರು ಇದ್ದಾರೆ, ಆಫ್ಘೇ ಮಟ್ಟದಲ್ಲಿ ಬಡವರು, ಸ್ಮಾಲ್ ಫಾರ್ಮರ್ಸ್ ಇದ್ದಾರೆ, ಭೂಹೀನರು ಇದ್ದಾರೆ, ಅವರಿಗೂ ಸಕ್ರಮಗೊಳಿಸಬೇಕೆಂದು ಕೇಳುತ್ತಿದ್ದಾರೆ. ಹಿಂದೆ ಮಾನ್ಯ ಬಸವಲಿಂಗಪ್ಪನವರು ಇದೇ ಖಾತೆಗೆ ಬಂದು ಹೋದರು. ನಂತರ ಮಾನ್ಯ ಖಾರ್ಗೆಯವರು ಬಂದಾಗ ಇದು ಮುಂದುವರಿಯಿತು. ಕಳೆದ ವರ್ಷ ನಾನು ದಲಿತ ಸಂಘರ್ಷ ಸಮಿತಿಯವರನ್ನು ಕರೆದು ಮಾತನಾಡಿದಾಗ ಅವರು ಇಂಥ ಕೇಸುಗಳು ಬಹಳ ಇವೆ, ಇದನ್ನು ಸಕ್ರಮ ಗೊಳಿಸಬಾರದು, ಹಾಗೆಯೇ ಹಂಚಿಕೊಡದು, ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರವೇ ಹಂಚಬೇಕೆಂದು ಜೋಳಿದರು. ಅವರು ನನ್ನ ಜೊತೆ ಸುದೀರ್ಘವಾಗಿ ಚರ್ಚೆ ಮಾಡಿದರು. ಎಸ್.ಸಿ. ಎಸ್.ಟಿ. ಯವರಿಗೆ ಏನು ಕೊಡಬೇಕೋ ಅಷ್ಟನ್ನು ಅವರಿಗೆ ಕೊಡಬೇಕಾಗುತ್ತದೆ. ಇನ್ನು ಉಳಿದುದನ್ನು ಯಾವ ರೀತಿ ಹಂಚಬೇಕೆಂಬ ಪ್ರಶ್ನೆ ಬರುತ್ತದೆ. ಇದನ್ನು ಸಕ್ರಮಗೊಳಿಸಬೇಕೇ, ಆಥವಾ ಹಂಚಬೇಕೇ, ಎಂಬ ಎರಡು ರೀತಿಯ ವಿಷಯಗಳು ಇದರಲ್ಲಿ ಬರುತ್ತವೆ. ಒತ್ತಡ ಬಂತು ಎಂದ ಕೂಡಲೇ ನಾವು ಆತುರವಾಗಿ ಈ ಪ್ರಸೂದೆಯನ್ನು ಪಾಸ್ ಮಾಡುವುದಕ್ಕಾಗುವುದಿಲ್ಲ.....

ಶ್ರೀ ಎಂ. ಎಸ್. ಕೃಷ್ಣನ್.—ನಾವು ಈ ಪ್ರಶ್ನೆಯನ್ನು ಎರಡು ವರ್ಷಗಳಿಂದ ಒಂದೇ ಸಮನೆ ಪ್ರಸ್ತಾಪ ಮಾಡುತ್ತಲೇ ಇದ್ದೇವೆ, ತಾವು ಇದೇ ಉತ್ತರವನ್ನೇ ಹೇಳುತ್ತಿದ್ದೀರಿ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಂದಿನ ಅಧಿವೇಶನ ಸೇರಿದ ಮೊದಲನೇ ದಿವಸವೇ ಇದನ್ನು.....

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ಮಾಡುವುದಕ್ಕೆ ೨ ವರ್ಷಗಳು ಬೇಕೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ತಮಗೆ ಹೇಳುತ್ತೇನೆ, ಇದನ್ನು ಅಷ್ಟು ಆತುರವಾಗಿ ಪಾಸ್ ಮಾಡುವುದಕ್ಕಾಗುವುದಿಲ್ಲ ಅಲ್ಲದೆ ಈ ಸದನದಲ್ಲೂ ಕೂಡ ಒಂದೇ ದಿವಸದಲ್ಲಿ ಇದನ್ನು ಪಾಸ್ ಮಾಡುವುದಕ್ಕೂ ಆಗುವುದಿಲ್ಲ. ಸಲಹೆ ಸೂಚನೆಗಳು ಏನು ಬರುತ್ತವೆ ಅವನ್ನು ತೆಗೆದುಕೊಳ್ಳ ಬೇಕಾಗುತ್ತದೆ, ಎಸ್. ಸಿ. ಎಸ್. ಟಿ. ಗೆ ಏನು ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ಭೂಹೀನರು ಯಾರಿದ್ದಾರೆ ಅವರಿಗೆ ಕೊಡಬೇಕಾಗುತ್ತದೆ. ಇದರ ಜೊತೆಗೆ ಶ್ರೀಮಂತರು ಇದ್ದಾರೆ, ಫಾರೆಸ್ಟ್ ಲ್ಯಾಂಡ್ ಅತಿಕ್ರಮಣ ಆಗಿದೆ, ಗೈರಾಣ ಮಾಡಿರ ತಕ್ಕದ್ದು ಇದೆ, ಎಕ್ಸೆಸ್ ಭೂಮಿ ಇದೆ. ಇದನ್ನೆಲ್ಲಾ ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಕೂಡ ಕಾನೂನು ತೊಡಕು ಇದೆ. ಈ ಮುಖ್ಯ ನಮ್ಮ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ. ಅದೇನೆಂದರೆ ಯಾರು ಸರ್ಕಾರೀ ಜಮೀನನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ

---

* ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆಂಧ್ರಪ್ರದೇಶವನ್ನು ಸರ್ಕಾರದಲ್ಲಿ ಒಂದು ತೀರ್ಮಾನ ಆಗುವವರೆಗೂ ಅವರು ಮಾಡುತ್ತಿರುವ ಜಮೀನಿನಿಂದ ಹೊರಗೆ ಹಾಕಬಾರದೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ಗೆಲ್ಲಿಕ್ಕೆ ಸುಂಟಿತವಾಗಿ ಯಾರು ಬಗರ್ ಹುಕುಂ ಮಾಡುತ್ತಿದ್ದರು ಅವರನ್ನು ಹೊರಗೆ ಹಾಕಿದರೆ ಆಂಧ್ರಾದ್ದನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ, ಬರುವ ಆಗಸ್ಟ್ ಅಥವಾ ಸೆಪ್ಟೆಂಬರ್‌ನಲ್ಲಿ ಮತ್ತೆ ಅಧಿವೇಶನ ಸೇರಿದಾಗ ಮೊದಲನೆಯ ದಿವಸವೇ ಈ ಮಸೂದೆಯನ್ನು ಸದನದ ಮುಂದಿಡುತ್ತೇನೆ. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳೇ ನನ್ನನ್ನು ಕೇಳಿದರು, ನೀವು ಕಂದಾಯ ಮಂತ್ರಿಗಳಾಗಿ ಈ ಕೆಲಸವನ್ನು ಏತಕ್ಕೆ ಪೂರ್ತಿ ಮಾಡಲಿಲ್ಲ ಎಂದು. He is so particular about it. I am also very particular.

SRI B. BASAVALINGAPPA.—He should have been told that it is not so simple.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಬಹಳ ಕ್ಲಿಷ್ಟವಾದುದು. ಆದ್ದರಿಂದಲೇ ಮುಂದಿನ ಅಧಿವೇಶನ ಸೇರಿದಾಗ ಮೊದಲನೇ ದಿವಸವೇ ಇದನ್ನು ಸಭೆಯ ಮುಂದಿಡುತ್ತೇನೆಂದು ಹೇಳಿದ್ದು.

ಅಧ್ಯಕ್ಷರು.—ಇಲ್ಲಿಗೆ ಇದರ ಚರ್ಚೆ ಮುಕ್ತಾಯವಾಯಿತು.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮೊನ್ನೆ ನಾನು ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಬಂದಮೇಲೆ ಅವರಿಂದ ಉತ್ತರವನ್ನು ಕೊಡಿಸುತ್ತೇನೆಂದು ತಾವು ಮೊನ್ನೆ ಹೇಳಿದ್ದೀರಿ. ಈಗ ಮುಖ್ಯಮಂತ್ರಿಗಳಿದ್ದಾರೆ...

ಅಧ್ಯಕ್ಷರು.—ನಿಮ್ಮದು ಸ್ಪೆಷಲ್ ಕೇಸ್ ಎಂದು ಇವತ್ತು ಅಜೆಂಡಾದಲ್ಲಿ ಸೇರಿಸಿದ್ದೇನೆ. ಮುಖ್ಯ ಮಂತ್ರಿಗಳಿಂದ ಉತ್ತರವಾದಮೇಲೆ...

ಶ್ರೀ ರಾಮಮುಕೃಷ್ಣ ಹೆಗಡೆ.—ಇವತ್ತು ಕ್ವೊಶ್ಚನ್ ಅವರ್ ಇಲ್ಲ. ಇವತ್ತು ಏಷ್ಟು ಹೊತ್ತು ಆಗುತ್ತದೋ ಗೊತ್ತಿಲ್ಲ. ಇವತ್ತಿನ ಬದಲು ಸೋಮವಾರ ತೆಗೆದುಕೊಂಡರೆ ತೊಂದರೆ ಏನೂ ಆಗುವುದಿಲ್ಲ ಇಲ್ಲತಾನೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ಈಗ ಉತ್ತರ ಹೇಳಿರತಕ್ಕದ್ದರ ಬಗ್ಗೆ ನಾವು ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ...

ಅಧ್ಯಕ್ಷರು.—ದಯವಿಟ್ಟು ಕೂತುಕೊಳ್ಳಿ. ನಿಮಗೆ ಅವರು ಎಷ್ಟೇ ಸಮಾಧಾನವಾಗಿ ಉತ್ತರ ಪನ್ನು ಹೇಳಿದರೂ ಕೂಡ ಮತ್ತೆ ಮತ್ತೆ ಕೇಳುವುದಕ್ಕೆ ಎದ್ದು ನಿಲ್ಲುತ್ತೀರಿ...

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ತಾವೇ ನಮಗೆ ರಕ್ಷಣೆಯನ್ನು ಕೊಡಬೇಕು.

ಅಧ್ಯಕ್ಷರು.—ಮಂತ್ರಿಗಳು ಆಗಲೇ ಹೇಳಿದ್ದಾರೆ, ಮುಂದಿನ ಅಧಿವೇಶನ ಪ್ರಾರಂಭವಾದ ಹೊದಲನೇ ದಿವಸವೇ ಇದನ್ನು ಇಡುತ್ತೇನೆ ಅಂತ...

ಶ್ರೀ ಎಂ. ಎಸ್. ಕೃಷ್ಣನ್.—ಇದು ಕ್ಲಿಷ್ಟವಾದ ಸಮಸ್ಯೆ ಯಾಗಿದೆ. ಈ ಸಮಸ್ಯೆ ಕಳೆದ ಆರು ವರ್ಷಗಳಿಂದ ಇದೆ. ಇದನ್ನು ಏತಕ್ಕೆ ವಿಚಾರ ಮಾಡುತ್ತಿಲ್ಲ ? ಈಗಾಗಲೇ ಅಧಿವೇಶನವು ಮುಗಿಯುತ್ತಾ ಬಂದಿದೆ. ಇನ್ನು ಎರಡು ದಿವಸಗಳಲ್ಲಿ ಮುಗಿಯುತ್ತದೆ. ಈಗಲೂ ಕೂಡ ಅಧಿವೇಶನವನ್ನು ೨೨-೨೩ರ ವರೆಗೆ ಮುಂದುವರಿಸಿ ಇದನ್ನು ತೆಗೆದುಕೊಳ್ಳುತ್ತೇವೆನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ,...

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ನಾವು ಪ್ರೊಟೆಸ್ಟ್ ಮಾಡುತ್ತೇವೆ. ಹಾಗೂ ನಾವು ವಾಕೌಟ್ ಮಾಡುತ್ತೇವೆ.

SRI M. S. KRISHNAN.—We will walk out.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾದ ಪಂಪಾಪತಿಯವರು ಕೆ. ಬಿ. ಶಾನಪ್ಪನವರು, ಎಂ. ಎಸ್. ಕೃಷ್ಣನ್‌ರವರು, ಆರ್. ವೆಂಕಟರಾಮಯ್ಯ ಮತ್ತು ಟಿ. ಎಸ್. ಮಣಿ ಇವರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದುದನ್ನು ಅಧಿಕೃತವಾಗಿ ದಾಖಲೆ ಮಾಡಬಾರದೆಂದು ಅಧ್ಯಕ್ಷರು ಆದೇಶಿಸಿದರು.)

ಶ್ರೀ ಎಂ. ಎಸ್. ಕೃಷ್ಣನ್.—ನಾವು ಕುಳಿತುಕೊಳ್ಳುವುದಿಲ್ಲ. ನಾವು ಹೊರಗೆ ಹೋಗುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಈ ರೀತಿ ವರ್ತನೆ ಮಾಡಿದರೆ ನಿಮ್ಮ ನಾಲ್ಕುಮಂದಿಯ ಮೇಲೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. Nothing will be recorded. What ever you have said, will not be recorded. It is expunged. The matter has been closed after my ruling.

(Sriyuths M. S. Krishnan, R. Venkataramaiah, pampapathi, K. B. Shanappa and T. S. Mani walked out of the House)

ಅಧ್ಯಕ್ಷರು.—ಇವರು ವಾಕೌಟ್ ಮಾಡಲು ಬಂದಿದ್ದರು, ನಾಳೆ ಪೇಪರ್‌ನಲ್ಲಿ ಬರಲಿ ಅಂಥ. ಮಾನ್ಯ ಕೆ. ಹೆಚ್. ಪಾಟೀಲರೇ ತಾವು ಮಾತನಾಡಿ.

Finan Cialh Business

ರೈಲರ್-ರ್ನೇ ಸಾಲಿನ ಬೇಡಿಕೆಗಳ ವೇಲಿನ ಚರ್ಚೆ ಬೇಡಿಕೆಗಳ ಕ್ರಮ ಸಂ ೧೭,೧೮,೧೯,೨೦, ೨೨,೩೯, ೪೦,೪೧,೪೨,೪೩,೨೭ ಮತ್ತು ೫೫—ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಇತರೆ ಬೇಡಿಕೆಗಳು.

ಶ್ರೀ ಕೆ. ಹೆಚ್. ಪಾಟೀಲ್(ಗದಗ್).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಿಸಿದ ಅನೇಕ ಬೇಡಿಕೆ ಮೇಲೆ ಎರಡೂಕಡೆಯ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚು ಸಮಯವನ್ನು ತೆಗೆದು ಕೊಳ್ಳದೆ ಕೆಲವೇ ಮಾತುಗಳನ್ನು ಆಡಿ ಕೆಲವು ವಿಷಯಗಳ ಕೊಡುಬೇಕಾಗಿರುವ ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಈ ಪತ್ರಿಕೆಯ ದಿವಸ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷಗಳ ಲಾಗಾಯ್ತು ಏನು ಹೇಳುತ್ತಾ ಬಂದಿರುತ್ತಾರೆ ಅದಕ್ಕೂ ಇದಕ್ಕೂ ಬಹಳ ದೂರ ಇರುತ್ತದೆ. ಅವರು ಹೇಳುತ್ತಿದ್ದಂಥ ದೆವಲಪ್‌ಮೆಂಟ್ ಆಕ್ಟಿವಿಟೀಸ್, ಪ್ಲಾನಿಂಗ್ ಎಂದು ಹೇಳಿ ಗೋಡೌನ್ ಕಟ್ಟಿಸುತ್ತೇವೆ, ಪುನೆಗೆಳನ್ನು ಕಟ್ಟಿಸುತ್ತೇವೆಂದು ತೋರಿಸುತ್ತಿದ್ದರೇ ವಿನಃ ರಚನಾತ್ಮಕವಾದ ಮತ್ತು ದೇಶಕ್ಕೆ ಉತ್ಪಾದನೆಯನ್ನು ಮಾಡತಕ್ಕಂಥ ಯಾವುದೇ ಯೋಜನೆಯನ್ನು ಇಳಿಪಡಿಸಿಕೊಳ್ಳದಿರುವುದು ಅತ್ಯಂತ ವಿಷಾದನೀಯ. ಅವರು ಪ್ರಾಯಶಃ ಕಠಿಣಮಯವಾದ ಬಜೆಟ್‌ನ್ನು ತಂದು ಇದರಲ್ಲಿ ನಾವು ಏನು ಮಾಡಬೇಕು ಎನ್ನುವ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ಮಾಡಲಾರದಂಥ ಅನೇಕ ಕಾರ್ಯಕ್ರಮಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ ಒಂದು ಹೇಳುತ್ತೇನೆ. "ನವದೆಹಲಿಯ ಅಖಿಲ ಭಾರತ ಅನುಸೂಚಿತ ಜಾತಿ ಸಹಕಾರ ಅಭಿವೃದ್ಧಿ ನಿಗಮದಿಂದ ಕಾರ್ಯಗತ ಗೊಳಿಸಲಾಗುವ ಬೆಂಗಳೂರು ಜಿಲ್ಲೆಯಲ್ಲಿರುವ ಹಣ್ಣು, ಹೂವು ಮತ್ತು ತರಕಾರಿ ರಫ್ತು ಯೋಜನೆಗಳನ್ನು ಇನ್ನೂ ಎರಡು ಜಿಲ್ಲೆಗಳಿಗೆ ವಿಸ್ತರಿಸುವುದು" ಎಂದು ಹೇಳಿದ್ದೀರಿ, ಬಹಳ ಸಂತೋಷ, ಸಮ್ಮಿಲ್ಲಿರತಕ್ಕಂಥ ಪೆಡ್ಯೂಲ್‌ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್ ಇನ್‌ಸ್ಟಿಟ್ಯೂಷನ್‌ಗಳಿಗೆ ೪-೫ ವರ್ಷಗಳ ಹಿಂದೆ ಮಾಡಿದಂಥ ಇನ್‌ಸ್ಟಿಟ್ಯೂಷನ್‌ಗಳು. ಅವಕ್ಕೆ ಹಣವನ್ನು ಕೊಡಬೇಕೆಂಬ ಇನ್ನೊಂದು ದೃಷ್ಟಿಯಿಂದ ಪಂಡ್ಸ್ ಕೊಟ್ಟಿದೆ. ಹೇಗೋ ಅರ್ಜಿ ಹಾಕಿಕೊಳ್ಳುವ ಅವಕಾಶವನ್ನು ತೆಗೆದುಕೊಂಡು ಸಮಾಜದ ದಳ್ಳಾಳಿಗಳು ಹಣವನ್ನು ತಿಂದು ಹಾಕುತ್ತಿದ್ದಾರೆ, ಏತಕ್ಕೆ ಇಂಥ ಯೋಜನೆಗಳನ್ನು ತರುತ್ತೀರಿ ? ಏತಕ್ಕೆ ಹಣವನ್ನು ವಿಚ್ರ್ಯುಮಾಡುತ್ತೀರಿ. ಇದು ಸೆಬ್ಬುಲೈನವರು ಕೊಡಬೇಕಾದ ಹಣ, ಇದಕ್ಕೆ ನಿಮ್ಮದು ಏನು ಬೇಕಾಗುತ್ತದೆ ? ಇದಕ್ಕೆ ಬೇರೆ ಸೊಸೈಟಿ ಮಾಡಿ ಇಂಪ್ಲಿಮೆಂಟ್ ಮಾಡಬೇಕೆಂದು ಮೆಕಾವನ್ ಕಮಿಟಿಯವರು ಯೋಚಿಸಿದ್ದರು. ಆದು ಕಾರ್ಯಗತ